ಖಾತ್ರಿ ಪಡಿಸಲು ಶಶಿಕಾಂತನನ್ನು ಈ ಪರಿಸ್ಥಿತಿಯಲ್ಲಿ ಮತ್ತೆ ಇವಳ ಮುಂದೆ ತಂದು ನಿಲ್ಲಿಸಿರಬೇಕು ಎಂದು ಅವರಿಗೂ ಅನ್ನಿಸಿತು. ಏನಿದು ವಿಪರ್ಯಾಸ! ಇದನ್ನೇ 'ದೈವ ಲೀಲೆ' ಎನ್ನುವುದು!

ಸುಜಾತಾ ಅಂದು ಅಲ್ಲಿಯೇ ಉಂಡು ಮಲಗಿದಳು. ಯಾರಿಗೂ ನಿದ್ರೆ ಬರಲಿಲ್ಲ. ಕೆಲದಿನ ತಮ್ಮ ಜೊತೆಗಿರಲು ಅವಳನ್ನು ದಂಪತಿ ಕೇಳಿಕೊಂಡರು.

ತಾನು ಇಲ್ಲಿ ಉಳಿದರೆ ಈತನಿಗೆ ಹೆದರಿಕೊಂಡತಾಗುತ್ತದೆ. ತಪ್ಪು ಮಾಡಿದವ ಅವನು, ತಾನೇನಲ್ಲವಲ್ಲ ಅಂದುಕೊಂಡಳು. ಅವನ ಮೇಲಿನ ಸಿಟ್ಟಿನಿಂದಾದರೂ ತಾನು ಅವನಿಗಿಂತ ಉತ್ತಮ ವ್ಯಕ್ತಿಯ ಜೊತೆ ವಿವಾಹವಾಗಿ ಸುಖವಾಗಿರಬಹುದಾಗಿತ್ತು. ಆದರೆ ತನಗಾಗಲೇ ವಿವಾಹದ ಬಗ್ಗೆಯೇ ಜಿಗುಪ್ಸೆ ಬಂದಿತ್ತಲ್ಲ. ಇದಕ್ಕೆಲ್ಲ ಅವನೇ ಕಾರಣ.

ಸಾಯಂಕಾಲ ಬರುವುದಾಗಿ ಹೇಳಿ ಸುಜಾತಾ ತನ್ನ ಕಾಟೇಜಿನತ್ತ ಹೆಜ್ಜೆ ಹಾಕಿದಳು.

ಮುಂದೆ ಎಷ್ಟೋ ದಿನ ಏನೂ ನಡೆದೇ ಇಲ್ಲವೆಂಬಂತೆ ಸುಜಾತಾ ವರ್ತಿಸಿದಳು. ಆದರೆ ಬೆನ್ನು ಬಿಡದ ಬೇತಾಳನಂತೆ ಶಶಿಕಾಂತ ಮತ್ತೆ ಒಂದು ದಿನ ಅವಳ ಮನೆಗೆ ಬಂದ. ಈ ಬಾರಿ ಆಕೆ ಅವನ ನೋಟ ತಪ್ಪಿಸಲು ಪ್ರಯತ್ನಿಸಲಿಲ್ಲ. ಈ ಕೆಲವು ದಿನಗಳಲ್ಲಿ ಅವನು ಜೀವಚ್ಛವವಾಗಿ ಹೋಗಿದ್ದ. ಗುಳಿ ಬಿದ್ದ ಕೆನ್ನೆಗಳು, ಪಾತಾಳಕ್ಕೆ ಇಳಿದು ಹೋದಂತಿದ್ದ ಕಣ್ಣುಗಳು, ಅವನ ಮುಖದಲ್ಲಿನ ವರ್ಚಸ್ಸನ್ನು ಮಾಯವಾಗಿಸಿದ್ದವು. ಸುಜಾತಾಳಿಗೆ ಅವನೊಬ್ಬ ರೋಗಿಯಂತೆ ಕಂಡು ಬಂದ.

ಅವಳ ಮನಸ್ಸು ಕರಗಿತು. ಧ್ವನಿಯಲ್ಲಿನ ರೋಷ ಅಡಗಿ ಮಾತುಗಳು ಹೊರಡಲಿಲ್ಲ. ಕಣ್ಣುಗಳಲ್ಲಿ ಮಾರ್ದವತೆ ಉಕ್ಕಿ ಬಂತು.

ಇಪ್ಪತ್ತು ವರುಷಗಳ ತನ್ನ ಶಾಲಾ, ಕಾಲೇಜುಗಳ ಸಂಗಾತಿ ಅವನು. ಒಂದು ದಿನವೂ ತನ್ನಲ್ಲಿ ತಪ್ಪಾಗಿ ನಡೆಯದಾತ. ತನ್ನನ್ನು ಜೋಪಾನವಾಗಿ ಸಂರಕ್ಷಿಸಿಕೊಂಡು ಬಂದಾತ. ನಡುವೆ ಎಷ್ಟೋ ವರ್ಷ ಕಣ್ಮರೆಯಾದರೂ ಈಗ, ಈ ಸ್ಥಿತಿಯಲ್ಲಿ ತನ್ನ ಎದುರು ಪ್ರತ್ಯಕ್ಷನಾಗಿದ್ದಾನೆ. ಈಗ ಆತನ ಮುಖ, ಶರೀರದಲ್ಲಿ ವೃದ್ಧಾಪ್ಯ ಎದ್ದು ಕಾಣುತ್ತಿತ್ತು.

'ಏನು ಬೇಕಿತ್ತು?' ಹಾಗನ್ನುತ್ತಲೇ ಆತನನ್ನು ಒಳಗೆ ಆಹ್ವಾನಿಸದೆ ಹೊರಗಿನ ಒಂದು ಕುರ್ಚಿಯಲ್ಲಿ ತಾನು ಕುಳಿತು ಇನ್ನೊಂದನ್ನು ಆತನ ಮುಂದೆ ತಳ್ಳಿದಳು.

'ಸುಜಾತಾ, ನೀನು ನನ್ನನ್ನು ಬೈದು ಹೊರಗೆ ನೂಕಿದರೂ ಸರಿಯೇ. ಅಂದು ನನ್ನ ಮಾತು ಮುಗಿಯುವ ಮುನ್ನವೇ ನೀನು ಎದ್ದು ಹೋದೆ. ಇವತ್ತಾದರೂ ಸಮಾಧಾನದಿಂದ ಕೇಳು.'

ಆಕೆ ಬಾಯಿ ತೆರೆಯದೆ ಬೇರೆಲ್ಲೊ ನೋಡುತ್ತ ಉಳಿದಳು. ಆತ ಮುಂದುವರಿಸಿದ.

'ಲಕ್ಷ್ಮಿಯನ್ನು ಮದುವೆಯಾದ ಬಳಿಕ ನಿನ್ನನ್ನು ಮತ್ತೆ ಕಾಣಬೇಕೆನ್ನುವ, ಕಂಡು ಮಾತನಾಡಬೇಕೆನ್ನುವ ಕುತೂಹಲ ಯಾವತ್ತೂ ನನ್ನನ್ನು ಕಾಡಿರಲಿಲ್ಲ. ನಿಜ ಹೇಳಬೇಕೆಂದರೆ, ಅವಳು ನನ್ನನ್ನು ಬಿಟ್ಟು ಕಾಣದ ಲೋಕಕ್ಕೆ ಹೋದ ಬಳಿಕವೇ ಕೆಲವು ಬಾರಿ ನಿನ್ನ ನೆನಪಾದದ್ದು ನಿಜವೇ. ಆದರೆ ಇಲ್ಲಿ ಮತ್ತೆ ನಿನ್ನನ್ನು ಸಂಧಿಸಿದ ಬಳಿಕ ನನ್ನಲ್ಲೇ ತಳಮಳ ಶುರುವಾಯಿತು. ಇಷ್ಟು ವರುಷಗಳ ಬಳಿಕ ನಾವಿಬ್ಬರೂ ಬಯಸದೆಯೇ ಭೇಟಿಯಾಗಿದ್ದೇವೆ. ಇದು ದೈವಿಚ್ಛೆ ಯಾಕಾಗಿರಬಾರದು ಎಂದು ಅನ್ನಿಸಹತ್ತಿದೆ. ಸುಜಾತಾ, ನಾಚಿಕೆ ಬಿಟ್ಟು ಮತ್ತೊಮ್ಮೆ ನಿನ್ನಲ್ಲಿ ಯಾಚಿಸುತ್ತಿದ್ದೇನೆ. ದಯವಿಟ್ಟು ನನ್ನನ್ನು ತಿರಸ್ಕರಿಸಬೇಡ. ಜೀವನದಲ್ಲಿ ಉಳಿದ ಕೆಲವು ವರ್ಷಗಳಾದರೂ ನಾವು ಬಾಳ ಸಂಗಾತಿಗಳಾಗಿರಬಹುದಲ್ಲ?'